RNU AIR DHARWAD

# NOVEMBER 25, 2024
## AKASHAVANI - DHARWAD
## PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಗದಗ ತಾಲೂಕು ಐತಿಹಾಸಿಕ ಲಕ್ಕುಂಡಿಯ, ಪ್ರಾಚ್ಯಾವಶೇಷಗಳ ಅನ್ವೇಷಣೆ, ರಾಜ್ಯಕ್ಕೆ ದಿಕ್ಸೂಚಿ – ಎಚ್.ಕೆ. ಪಾಟೀಲ.
- 'ಆನೆ ಪಥ'; ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ, ಚರ್ಚೆ – ಚಿಕ್ಕಮಗಳೂರು ಶಾಸಕ ಎಚ್.ಡಿ. ತಮ್ಮಯ್ಯ.
- ಬೆಂಗಳೂರಿನ ಬಸವನ ಗುಡಿಯಲ್ಲಿ ಐತಿಹಾಸಿಕ ಕಡಲೆಕಾಯಿ ಪರಿಷೆಗೆ ಇಂದು, ಚಾಲನೆ.
- ಮನದ ಮಾತು; ಮೈಸೂರಿನ ಅರ್ಲಿ ಬರ್ಡ್ ಕಾರ್ಯವನ್ನು ಶ್ಲಾಘಿಸಿದ, ಪ್ರಧಾನಮಂತ್ರಿ.
- ಇಂದು, ಅಂತಾರಾಷ್ಟ್ರೀಯ, ಮಹಿಳಾ ಶೋಷಣೆ ನಿವಾರಣಾ, ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

101 ಬಾವಿ, 101 ದೇವಸ್ಥಾನಗಳ ಇತಿಹಾಸ ಹೊಂದಿರುವ, ಗದಗ ತಾಲೂಕು ಲಕ್ಕುಂಡಿಯಲ್ಲಿ ಕೈಗೊಂಡಿರುವ ಪ್ರಾಚ್ಯಾವಶೇಷಗಳ ಅನ್ವೇಷಣೆ ರಾಜ್ಯಕ್ಕೆ ದಿಕ್ಸೂಚಿಯಾಗಲಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ತಿಳಿಸಿದ್ದಾರೆ. ಗದಗ ಜಿಲ್ಲೆ, ಲಕ್ಕುಂಡಿ ಗ್ರಾಮದ, ಹಾಲಗುಂಡಿ ಶ್ರೀ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ, ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ, ಐತಿಹಾಸಿಕ ಅವಶೇಷಗಳ ಅನ್ವೇಷಣೆ ಕಾರ್ಯಕ್ಕೆ, ಸಚಿವರು ಚಾಲನೆ ನೀಡಿದರು. ಪ್ರಾಚ್ಯ ಅವಶೇಷಗಳನ್ನು ಸಂಗ್ರಹಿಸುವ ಮೂಲಕ, ಹುದುಗಿ ಹೋಗಿರುವ ದೇವಸ್ಥಾನ ಹಾಗೂ ಬಾವಿಗಳ ಅನ್ವೇಷಣೆ ಜೊತೆಗೆ, ಮರು ಸೃಷ್ಟಿಸಲು ಕ್ರಮ ಕೈಗೊಳ್ಳಲಾಗುವುದು ಎಂದು, ಸಚಿವರು ಹೇಳಿದರು.

<><><>

ರಾಜ್ಯದ ರೈತರಿಗೆ, ಪ್ರಮಾಣಿತ ಹಾಗೂ ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳನ್ನು, ಸಕಾಲದಲ್ಲಿ ಸಹಾಯ ಧನದ ಅಡಿ, ಒದಗಿಸಲಾಗುತ್ತಿದೆ ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಸ್ವಾಮಿ ತಿಳಿಸಿದ್ದಾರೆ.

2024–25ನೇ ಹಂಗಾಮಿಗೆ 12 ಲಕ್ಷದ 92 ಸಾವಿರ ರೈತರಿಗೆ, 5 ಲಕ್ಷದ 77 ಸಾವಿರ ಕ್ವಿಂಟಾಲ್ ಬೀಜ ವಿತರಿಸಿ, ಕೃಷಿ ಅಭಿವೃದ್ಧಿಯತ್ತ ದಿಟ್ಟ ಹೆಜ್ಜೆ ಇಡಲಾಗಿದೆ ಎಂದು, ಸಚಿವರು ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

<><><>

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಡಾನೆಗಳು, ಜನ ವಸತಿ ಪ್ರದೇಶಕ್ಕೆ ನುಗ್ಗುವುದನ್ನು ತಡೆಯಲು, ಬೆಳಗಾವಿಯ ಪ್ರಸಕ್ತ ಚಳಿಗಾಲದ ಅಧಿವೇಶನದಲ್ಲಿ, 'ಆನೆ ಪಥ ನಿರ್ಮಿಸಲು' ವಿಶೇಷವಾಗಿ ಚರ್ಚಿಸಲು, ಆಗ್ರಹಿಸುವುದಾಗಿ, ಶಾಸಕ ಎಚ್.ಡಿ. ತಮ್ಮಯ್ಯ ತಿಳಿಸಿದ್ದಾರೆ. ವಸ್ತಾರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ, ಕಾಡಾನೆಗಳು ರೈತರ ತೋಟಕ್ಕೆ ನುಗ್ಗಿ ಹಾನಿ ಮಾಡಿರುವುದನ್ನು ಅವರು, ಪರಿಶೀಲಿಸಿದರು. ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ಅವರೊಂದಿಗೆ ಚರ್ಚಿಸಿ, ಆನೆಗಳನ್ನು ನಿಯಂತ್ರಿಸಲು, ವೈಜ್ಞಾನಿಕ ಪರಿಹಾರ ಕಂಡುಕೊಳ್ಳಲಾಗುವುದು. 20ಕ್ಕೂ ಹೆಚ್ಚು ಕಾಡಾನೆಗಳನ್ನು ಚಿಕ್ಕಮಗಳೂರು ತಾಲೂಕಿನಿಂದ, ಭದ್ರಾ ಅಭಯಾರಣ್ಯಕ್ಕೆ ಸ್ಥಳಾಂತರಿಸಲು, ಕ್ರಮ ಕೈಗೊಳ್ಳಲಾಗುವುದು ಎಂದರು.

<><><>

ಬೆಳಗಾವಿಯ ಚಳಿಗಾಲದ ಅಧಿವೇಶನಕ್ಕೂ ಮುನ್ನ, ಅಧಿಕಾರಿಗಳ ಸಭೆ ಕರೆದು, ರಸ್ತೆ, ಕುಡಿಯುವ ನೀರು, ಇನ್ನಿತರ ಮೂಲಸೌಕರ್ಯ ಯೋಜನೆಗಳಿಗೆ, ಚಾಲನೆ ನೀಡಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. ಕನಕಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನತೆಯ ಆಶೋತ್ತರಗಳನ್ನು ಈಡೇರಿಸಲು, ಕಾಂಗ್ರೆಸ್ ಸರ್ಕಾರ ಬದ್ಧವಾಗಿದೆ, ಎಂದರು. ಕನಕಪುರದ ಆರ್.ಎಸ್. ಮೈದಾನದಲ್ಲಿ, ಕನಕಾಂಬರಿ ಮಹಿಳಾ ಒಕ್ಕೂಟ ಆಯೋಜಿಸಿದ್ದ, ಮಹಿಳಾ ಜಾಗೃತಿ ಮಹಾ ಸಮಾವೇಶದಲ್ಲಿ, ಡಿ.ಕೆ.ಶಿವಕುಮಾರ ಪಾಲ್ಗೊಂಡರು.

<><><>

ಬೆಂಗಳೂರಿನ ಬಸವನ ಗುಡಿಯಲ್ಲಿ ಐತಿಹಾಸಿಕ ಕಡಲೆಕಾಯಿ ಪರಿಷೆ ಸೊಬಗು ಕಳೆಗಟ್ಟಿದೆ. ಇಂದು, ಕಡಲೆಕಾಯಿ ಪರಿಷೆಗೆ ಅಧಿಕೃತ ಚಾಲನೆ ಸಿಗಲಿದೆ. ಆದರೆ, ವಾರಾಂತ್ಯದ ಹಿನ್ನೆಲೆ, ಕಳೆದ ಶನಿವಾರ ಮತ್ತು ಭಾನುವಾರ, ಬಸವನಗುಡಿಯಲ್ಲಿ ಜಾತ್ರೆ ಸದೃಷ ವಾತಾವರಣ ಕಾಣಸಿಕ್ಕಿತು. ಕಾರ್ತಿಕ ಮಾಸದ ಕೊನೆಯ ಸೋಮವಾರವಾದ ಇಂದು, ಶ್ರೀ ದೊಡ್ಡ ಬಸವಣ್ಣ ದೇವಸ್ಥಾನದಲ್ಲಿ, ಬಸವನಿಗೆ ಕಡಲೆಕಾಯಿ ಹಾಗೂ ಪುಷ್ಪಗಳಿಂದ ಅಲಂಕಾರ ಮಾಡಲಾಗುತ್ತಿದೆ. ಕನಕಪುರ, ದೊಡ್ಡ ಬಳ್ಳಾಪುರ, ರಾಮನಗರ, ಮಾಗಡಿ, ಮೈಸೂರು, ಮಂಡ್ಯ ಸೇರಿದಂತೆ, ರಾಜ್ಯದ ಹಲವೆಡೆಯಿಂದ ವ್ಯಾಪಾರಿಗಳು, ಕಡಲೆಕಾಯಿ ತಂದು ಮಾರಾಟ ಮಾಡುತ್ತಾರೆ.

<><><>

ದಕ್ಷಿಣಕನ್ನಡ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಪೂರಕವಾಗಿರುವ, ಪ್ರಸ್ತಾವಿತ ಪ್ರಮುಖ ಯೋಜನೆಗಳನ್ನು, ಶೀಘ್ರ ಅನುಷ್ಠಾನಗೊಳಿಸುವಂತೆ, ಸಂಸದ ಬ್ರಿಜೇಶ್ ಚೌಟ ಅವರು, ಕೇಂದ್ರ ಹಣಕಾಸು ಖಾತೆ ಸಚಿವರಾದ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದ್ದಾರೆ. ಮಂಗಳೂರಿನಲ್ಲಿ ಕೋಸ್ಟ್ ಗಾರ್ಡ್ ಅಕಾದೆಮಿ ಸ್ಥಾಪನೆ, ಜಾಗತಿಕ ಸಾಮರ್ಥ್ಯದ ಸೆಂಟರ್ ಆಗಿ ಪರಿವರ್ತಿಸುವ ಯೋಜನೆ, ಬ್ಯಾಂಕಿಂಗ್ ಸಂಶೋಧನಾ ಹಾಗೂ ತರಬೇತಿ ಸಂಸ್ಥೆ ಸ್ಥಾಪಿಸಲು, ಸೂಕ್ತ ಕ್ರಮ ಕೈಗೊಳ್ಳಲು ಮನವಿಯಲ್ಲಿ ಕೋರಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಸ್ವಾಮಿ ವಿವೇಕಾನಂದರ 162ನೇ ಜಯಂತ್ಯುತ್ಸವದ ಹಿನ್ನೆಲೆ, ಯುವ ವಿಚಾರಗಳ ಮಹಾಕುಂಭ, 'ವಿಕಸಿತ ಭಾರತ ಯಂಗ್ ಲೀಡರ್ಸ್ ಡೈಲಾಗ್' ಬರುವ, 2025ರ ಜನವರಿ 11 ಮತ್ತು 12 ರಂದು, ಹೊಸ ದಿಲ್ಲಿಯ ಭಾರತ ಮಂಟಪದಲ್ಲಿ ಜರುಗಲಿದ್ದು, ಕೋಟ್ಯಂತರ ಯುವಜನ ಭಾಗವಹಿಸಲಿದ್ದಾರೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ. ಆಕಾಶವಾಣಿಯ, ಜನಪ್ರಿಯ, 116 ನೇ ಅವೃತ್ತಿಯ, ಮನದ ಮಾತಿನಲ್ಲಿ, ಅವರು ಭಾನುವಾರ, ದೇಶ–ವಿದೇಶಗಳ ಭಾರತೀಯರನ್ನುದ್ದೇಶಿಸಿ, ಮಾತನಾಡಿದರು.

<><><>

ಪ್ರಧಾನಮಂತ್ರಿ ಮೋದಿ ಯುವ ಮಹಾಕುಂಭ ಧ್ವನಿ 47 ಸೆಕೆಂದುಗಳು

<><><>

ನಗರೀಕರಣದ ಹಿನ್ನೆಲೆ, ದೂರವಾಗುತ್ತಿರುವ ಗುಬ್ಬಚ್ಚಿಗಳ ಬಗ್ಗೆ ಉಲ್ಲೇಖಿಸಿದ ಪ್ರಧಾನಮಂತ್ರಿ, ಮೈಸೂರಿನ 'ಇ–ಬರ್ಡ್ ಸಂಸ್ಥೆ', ಮಕ್ಕಳಿಗಾಗಿ ಆರಂಭಿಸಿರುವ 'ಅರ್ಲಿ ಬರ್ಡ್' ಅಭಿಯಾನದ ಬಗೆ ಮೆಚ್ಚುಗೆ ವ್ಯಕ್ತ ಪಡಿಸಿದರು. ಗುಬ್ಬಿಗಳನ್ನು ಮರಳಿ ನಮ್ಮ ಮನೆ ಅಂಗಳಕ್ಕೆ ಕರೆತರುವ ಬಗ್ಗೆ ಆಲೋಚಿಸುವಂತೆ, ಮಕ್ಕಳಿಗೆ ಪಕ್ಷಿ ವೀಕ್ಷಕರಾಗುವಂತೆ, ಅವರು ಪ್ರೇರಣೆ ನೀಡಿದರು.

<><><>

ಪ್ರಧಾನಮಂತ್ರಿ ಮೋದಿ ಗುಬ್ಬಚ್ಚಿ ಕಥೆ–ವ್ಯಥೆ ಧ್ವನಿ 53 ಸೆಕೆಂದುಗಳು

<><><>

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು, ಪ್ರಧಾನಮಂತ್ರಿ ಅವರ 'ಮನ್ ಕೀ ಬಾತ್' ಕಾರ್ಯಕ್ರಮವನ್ನು, ಬಾಗಲಕೋಟೆಯ ಬಾದಾಮಿ ತಾಲೂಕಿನ ಬೇಲೂರು ಗ್ರಾಮದಲ್ಲಿ, ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ವಿದ್ಯಾರ್ಥಿಗಳು, ಯುವಜನತೆ ಹಾಗೂ ಗ್ರಾಮಸ್ಥರೊಂದಿಗೆ ಆಲಿಸಿದರು. ಅಳಿವಿನಂಚಿನಲ್ಲಿರುವ ಗುಬ್ಬಚ್ಚಿ ಸಂತತಿಯನ್ನು ರಕ್ಷಿಸಲು, ಚೆನ್ನೈನ ಕುಡುಗಲ್ ಟ್ರಸ್ಟ್ ಹಾಗೂ ಮೈಸೂರಿನ ಇ–ಬರ್ಡ್ ಸಂಸ್ಥೆ, ಶಾಲಾ–ಕಾಲೇಜು ಮಕ್ಕಳ ಮೂಲಕ, ಗುಬ್ಬಚ್ಚಿಗೆ ಸೂರು ನಿರ್ಮಿಸಿ, ಮರಳಿ ಮನೆ ಅಂಗಳಕ್ಕೆ ತರಲು, ಶತ ಪ್ರಯತ್ನ ನಡೆಸುತ್ತಿರುವುದು, ಶ್ಲಾಘನೀಯ ಎಂದು, ಎಕ್ಸ್ ಮಾಧ್ಯಮದಲ್ಲಿ ಸಚಿವರು ಪ್ರಕಟಿಸಿದ್ದಾರೆ.

<><><>

ಮಹಿಳೆಯರ ವಿರುದ್ಧದ ಹಿಂಸೆಯನ್ನು ತೊಡೆದು ಹಾಕಲು, ಮಹಿಳೆಯರಲ್ಲಿ ಆತ್ಮಸ್ಥೈರ್ಯ ತುಂಬಿ, ಹಿಂಸೆಯ ವಿರುದ್ಧ ಧೈರ್ಯದಿಂದ ಧ್ವನಿ ಎತ್ತುವಂತೆ, ಜಾಗ್ರತಿ ಮೂಡಿಸಲು, ಇಂದು, ಅಂತಾರಾಷ್ಟ್ರೀಯ ಮಹಿಳಾ ಶೋ ಣೆ ನಿವಾರಣಾ ದಿನವನ್ನು ಆಚರಿಸಲಾಗುತ್ತಿದೆ. ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ ನಿರ್ಣಯದಂತೆ, ಈ ಅಭಿಯಾನ ಇಂದಿನಿಂದ ಡಿಸೆಂಬರ್ 10ರ ವರೆಗೆ ನಡೆಯಲಿದೆ. ಜಗತ್ತಿನಾದ್ಯಂತ ಮಹಿಳೆಯರು ಅತ್ಯಾಚಾರ, ಕೌಟುಂಬಿಕ ದೌರ್ಜನ್ಯ ಸೇರಿದಂತೆ, ವಿವಿಧ ದೈಹಿಕ ಹಿಂಸೆಗೆ ಒಳಗಾಗುತ್ತಿದ್ದಾರೆ. ಈ ಬಗ್ಗೆ ಧ್ವನಿ ಎತ್ತುವಂತೆ, ಮಹಿಳೆಯರಲ್ಲಿ ಜಾಗೃತಿ ಮೂಡಿಸುವುದು, ಈ ದಿನದ ಪ್ರಮುಖ ಉದ್ದೇಶ. ಮಹಿಳೆಯರು, ಲಿಂಗ ಅಸಮಾನತೆ, ಲಿಂಗ ಆಧಾರಿತ ತಾರತಮ್ಯ, ಸಾಮಾಜಿಕ ಅಸಮಾನತೆ, ಇದರಿಂದ ಉಂಟಾಗುವ ಪರಿಣಾಮಗಳನ್ನು ಎದುರಿಸಲು, ಸಬಲರಾಗಬೇಕೆಂಬುದು ದಿನಾಚರಣೆ ಉದ್ದೇಶ.

<><><>

ಉಜ್ಬೇಕಿಸ್ಥಾನದ ಅಗ್ರ ಶ್ರೇಯಾಂಕಿತ ಖುಮೋಯುನ್ ಸುಲ್ತಾನೋವ್, ಕಲಬುರಗಿ ಮುಕ್ತ ಪುರುಷರ ಐ.ಟಿ.ಎಫ್. ಟೆನಿಸ್ ಟೂರ್ನಿಯ ಚಾಂಪಿಯನ್ ಕಿರೀಟ ಮುಡಿಗೇರಿಸಿಕೊಂಡಿದ್ದಾರೆ.

ರಷ್ಯಾದ ಬಾಗ್ದಾನ್ ಬಾಬ್ ರೋವ್ ವಿರುದ್ಧ ಜಯ ಗಳಿಸಿದರು. ಕಲಬುರಗಿಯ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಪಂದ್ಯಾವಳಿಯಲ್ಲಿ, ಪ್ರಶಸ್ತಿ ಫಲಕದೊಂದಿಗೆ, 3 ಲಕ್ಷ ರೂಪಾಯಿ ಬಹುಮಾನ ಹಾಗೂ 25 ಎ.ಟಿ.ಪಿ. ಅಂಕಗಳು ಅವರ ಖಾತೆಗೆ ಸೇರಿದವು. ರನ್ನರ್ ಅಪ್, ಬಾಬ್ ರೋವ್ 1 ಲಕ್ಷದ 79 ಸಾವಿರ ರೂಪಾಯಿ ನಗದು ಹಾಗೂ 16 ಎ.ಟಿ.ಪಿ. ಅಂಕಗಳನ್ನು ಪಡೆದಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ತುಮಕೂರು ಜಿಲ್ಲೆ, ಸೂರೆಗುಂಟೆ ಗ್ರಾಮದ ವ್ಯಾಪ್ತಿಯಲ್ಲಿ, ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಿಸಲು ಜಾಗೆ ಗುರುತಿಸಲಾಗಿದೆ ಎಂದು, ಗೃಹ ಖಾತೆ ಸಚಿವ ಜಿ.ಪರಮೇಶ್ವರ ತಿಳಿಸಿದ್ದಾರೆ. ಡಿಸೆಂಬರ್ 2ನೇ ತಾರೀಖು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಂಕುಸ್ಥಾಪನೆ ನೆರವೇರಿಸಲಿದ್ದು, ಕಾರ್ಯಕ್ರಮದ ಪೂರ್ವಸಿದ್ಧತೆ ಕುರಿತು, ಸ್ಥಳ ಪರಿಶೀಲನೆ ನಡೆಸಿ, ಅಧಿಕಾರಿಗಳಿಂದ ಅವರು ಮಾಹಿತಿ ಪಡೆದರು.

<><><>

ಗುರು ತೇಗ್ ಬಹಾದ್ದೂರ್ ಸಂಸ್ಮರಣೆಯ, ಹುತಾತ್ಮ ದಿನ ಆಚರಿಸಲಾಯಿತು. ರಾಷ್ಟ್ರಪತಿ ದ್ರೌಪದಿ ಮುರ್ಮು, ಗೌರವ ನಮನ ಸಲ್ಲಿಸಿದರು.

<><><>

ಇಂದಿನಿಂದ, ಸಂಸತ್ತಿನ ಚಳಿಗಾಲದ ಅಧಿವೇಶನ ಸಮಾವೇಶಗೊಳ್ಳಲಿರುವ ಹಿನ್ನೆಲೆ, ಹೊಸ ದಿಲ್ಲಿಯಲ್ಲಿ, ಕೇಂದ್ರ ರಕ್ಷಣಾ ಖಾತೆ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ, ಸರ್ವಪಕ್ಷ ಸಭೆ ಜರುಗಿತು.

<><><>

ಧಾರವಾಡದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕಾಲೇಜಿನಲ್ಲಿ, ದಕ್ಷಿಣ ವಲಯ ಅಂತರ್ ವಿಶ್ವವಿದ್ಯಾಲಯಗಳ, ಮಹಿಳಾ ಬ್ಯಾಡ್ಮಿಂಟನ್ ಪಂದ್ಯಾವಳಿ, ನಾಳೆಯಿಂದ 28ರ ವರೆಗೆ, ಜರುಗಲಿದೆ.

<><><>

ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ, ದಾವಣಗೆರೆಯ 17 ಕೇಂದ್ರಗಳಲ್ಲಿ, ಕೆ– ಸೆಟ್ ಪರೀಕ್ಷೆ ನಡೆಯಿತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಗದಗ ತಾಲೂಕು ಐತಿಹಾಸಿಕ ಲಕ್ಕುಂಡಿಯ, ಪ್ರಾಚ್ಯಾವಶೇಷಗಳ ಅನ್ವೇಷಣೆ, ರಾಜ್ಯಕ್ಕೆ ದಿಕ್ಸೂಚಿ – ಎಚ್.ಕೆ. ಪಾಟೀಲ.
- ‘ಆನೆ ಪಥ’; ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ, ಚರ್ಚೆ – ಚಿಕ್ಕಮಗಳೂರು ಶಾಸಕ ಎಚ್.ಡಿ. ತಮ್ಮಯ್ಯ.
- ಬೆಂಗಳೂರಿನ ಬಸವನ ಗುಡಿಯಲ್ಲಿ ಐತಿಹಾಸಿಕ ಕಡಲೆಕಾಯಿ ಪರಿಷೆಗೆ ಇಂದು, ಚಾಲನೆ.
- ಮನದ ಮಾತು; ಮೈಸೂರಿನ ಅರ್ಲಿ ಬರ್ಡ್ ಕಾರ್ಯವನ್ನು ಶ್ಲಾಘಿಸಿದ, ಪ್ರಧಾನಮಂತ್ರಿ.
- ಇಂದು, ಅಂತಾರಾಷ್ಟ್ರೀಯ, ಮಹಿಳಾ ಶೋ ‘ಣೆ ನಿವಾರಣಾ, ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ